ಲೋಕೋಪಯೋಗಿ ಇಲಾಖೆಯವರು ಕುಂದಾಪುರ ತಾಲ್ಲೂಕಿನಲ್ಲಿ ರಸ್ತೆ ಬದಿಯಲ್ಲಿ ಮನೆ ಕೆಡವಿರುವ ಬಗ್ಗೆ

೧೦೨೬. ಶ್ರೀ ಕೆ. ಪ್ರತಾಪ್‌ಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಕುಂದಾಪುರ ತಾಲ್ಲೂಕಿನಲ್ಲಿ ಕಳೆದ ಮೂರು ವರ್ಷಗಳಿಂದ ಲೋಕೋಪಯೋಗಿ ಇಲಾಖೆಯವರಿಂದ ಕೆಡವಿರುವ ರಸ್ತೆ ಬದಿಗಳಲ್ಲಿನ ಮನೆಗಳ ಸಂಖ್ಯೆ ಎಷ್ಟು?

ಆ) ಇಲಾಖೆಯವರು ಪೂರ್ವಗ್ರಹ ಪೀಡಿತರಾಗಿ ಈ ಮನೆಗಳನ್ನು ಕೆಡವಿರುವುದಾಗಿ ಜನರು ಅಭಿಪ್ರಾಯ ಪಡುತ್ತಿರುವುದು ನಿಜವೆ?

ಇ) ಹಾಗಿದ್ದಲ್ಲಿ ಇದಕ್ಕೆ ಕಾರಣರಾರು ಹಾಗೂ ಅವರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆಯೆ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಯವರು).—

ಅ) ೧೯೮೮ರಲ್ಲಿ ಮತ್ತು ೧೯೮೯ರಲ್ಲಿ ರಸ್ತೆಬದಿಯ ಯಾವುದೇ ಮನೆಗಳನ್ನು ಕೆಡವಿಲ್ಲ.೧೯೯೦ರಲ್ಲಿ ಇದ್ದವರಿಗೆ ರಸ್ತೆಬದಿಯ ಎರಡು ಅನಧಿಕೃತ ನಿರ್ಮಾಣವನ್ನು ಕುಂದಾಯ ಇಲಾಖೆಯು ಸಹಕಾರದಿಂದ ತೆಗೆಸಿದೆ.—

ಆ) ಇಲ್ಲ. ಈ ಬಗ್ಗೆ ಯಾವುದೇ ಮಾನವಿಗಳು ಬಂದಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಧಾರವಾಡ ಜಿಲ್ಲೆ ಮುಂಡರಗಿ ತಾಲ್ಲೂಕಿನ ಕಕ್ಕೂರು ಏತ ನೀರಾವರಿ ಯೋಜನೆ

೮೮೧. ಶ್ರೀ ಕೆ. ಹೆಚ್. ಕುರುಡಗಿ (ಮುಂಡರಗಿ).— ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ. —

ಅ) ಧಾರವಾಡ ಜಿಲ್ಲೆಯ ಮುಂಡರಗಿ ತಾಲ್ಲೂಕಿನಲ್ಲಿಯ ಕಕ್ಕೂರ ಏತ ನೀರಾವರಿಯು ಪ್ರಮಾಣಕ್ಕನುಗುಣವಾಗಿ ನಿರೀಕ್ಷಿತ ಪ್ರಮಾಣದಷ್ಟು ಹೆಕ್ಟೇರು ಭೂಮಿಗೆ ನೀರಾವರಿ ಸೌಲಭ್ಯ ಒದಗಿಸಲು ವಿಫಲವಾಗಲು ಕಾರಣಗಳೇನು?

ಆ) ಕಕ್ಕೂರ ಏತ ನೀರಾವರಿಯ ನೀರೆತ್ತುವ ಯಾಂತ್ರಿಕ ಉಪಕರಣವು ಕಡಿಮೆ ಅಶ್ವಶಕ್ತಿಯುಳ್ಳದ್ದು ಎಂಬುದು ನಿಜವೆ?

ಶ್ರೀ ಜಿ. ಪುಟ್ಟಸ್ವಾಮಿ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಕಕ್ಕೂರ ಏತ ನೀರಾವರಿ ಯೋಜನೆಯಿಂದ ನಿರೀಕ್ಷಿತ ಪ್ರಮಾಣದಲ್ಲಿ ನೀರಾವರಿ ಸೌಲಭ್ಯ ಒದಗಿಸದಿರಲು ಕಾರಣಗಳು ಕೆಳಕಂಡಂತಿವೆ.

೧. ಅಚ್ಚುಕಟ್ಟು ಪ್ರದೇಶದಲ್ಲಿರುವ ಕೆಲವು ಜಮೀನನ್ನು ರೈತರು ಸಮ ಮಾಡಿಕೊಳ್ಳದಿರುವುದು.

೨. ಅಚ್ಚುಕಟ್ಟು ಪ್ರದೇಶದಲ್ಲಿ ಬರುವ ಕೆಲವು ಜಮೀನನ್ನು ರೈತರು ಸ್ವಂತ ಪಂಪುಗಳ ಮುಖಾಂತರ ನದಿಯಿಂದ ನೀರೆತ್ತಿ ನೀರಾವರಿ ಮಾಡಿಕೊಳ್ಳುತ್ತಿರುವುದು.

ಆ) ನಿಜವಲ್ಲ.

ಧಾರವಾಡ ಜಿಲ್ಲೆಯ ಮುಂಡರಗಿ ತಾಲ್ಲೂಕಿನ ''ಹುಲಿಗುಡ್ಡ'' ನೀರಾವರಿ ಯೋಜನೆ

೮೫೫. ಶ್ರೀ ಕೆ.ಹೆಚ್. ಕುರಡಗಿ (ಮುಂಡರಗಿ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಧಾರವಾಡ ಜಿಲ್ಲೆಯ ಮುಂಡರಗಿ ತಾಲ್ಲೂಕಿನ 'ಹುಲಿಗುಡ್ಡ'ದ ನೀರಾವರಿ ಯೋಜನೆ ಈಗ ಯಾವ ಹಂತದಲ್ಲಿದೆ?

ಆ) ಈ ಯೋಜನೆಯನ್ನು ಪೂರ್ಣಗೊಳ್ಳಲು ಎಷ್ಟು ಕಾಲಾವಕಾಶ ಬೇಕಾಗುವುದೆಂ?